# ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ

**ಪೀಠಿಕೆ:–**

ನಿಗಮವು ಕರ್ನಾಟಕ ಸರ್ಕಾರವು ಕಂಪನಿ ಕಾಯ್ದೆ 1956 ರಡಿಯಲ್ಲಿ ಒಂದು ಸಾರ್ವಜನಿಕ ಉದ್ದಿಮೆಯಾಗಿ 20.04.2000 ರಂದು ಸ್ಥಾಪಿಸಿದೆ. ಆರ್ಥಿಕವಾಗಿ ಹಿಂದುಳಿದ ವಸತಿರಹಿತರಿಗೆ ವಸತಿ ನೀಡುವ ಮತ್ತು ಆರ್ಥಿಕವಾಗಿ ಹಿಂದುಳಿದ ನಿವೇಶನರಹಿತರಿಗೆ ನಿವೇಶನ ನೀಡುವ ಸರ್ಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸುವುದೇ ಈ ನಿಗಮದ ಉದ್ದೇಶವಾಗಿದೆ.

**ಮಿಷನ್:–**

ಪ್ರತಿ ಬಡವರಿಗೂ ಒಂದು ಸೂರು

ಮೇಲ್ಕಂಡ ಉದ್ದೇಶವನ್ನು ಈಡೇರಿಸಲು ನಿಗಮವು ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.

- ಬಸವ ವಸತಿ ಯೋಜನೆ
- ವಾಜಪೇಯಿ ನಗರ ವಸತಿ ಯೋಜನೆ
- ಕೇಂದ್ರ ಸರ್ಕಾರ ಪುರಸ್ಕೃತ ಯೋಜನೆಚೂದ ಪ್ರಧಾನ ಮಂತ್ರಿ ಆವಾಸ್ ಯೋಜನೆ [ ಗ್ರಾಮೀಣ(ಐಎವೈ)]
- ಡಾ॥ ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ (ಗ್ರಾಮೀಣ ಮತ್ತು ನಗರ)
- ದೇವರಾಜ್ ಅರಸು ವಸತಿ ಯೋಜನೆ (ವಿಶೇಷ ವಸತಿ ಯೋಜನೆ)
- ಗ್ರಾಮೀಣ ನಿವೇಶನ ಯೋಜನೆ
- ವಾಜಪೇಯಿ ನಗರ ನಿವೇಶನ ಯೋಜನೆ
- ಮಾನ್ಯ ಮುಖ್ಯಮಂತ್ರಿಗಳ ಒಂದು ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ

**ಸದರಿ ಯೋಜನೆಯಡಿ ಫಲಾನುಭವಿಯ ಅರ್ಹತಾ ಮಾನದಂಡ ಈ ಕೆಳಗಿನಂತಿವೆ :–**

- ಅರ್ಜಿದಾರರು ಕಡ್ಡಾಯವಾಗಿ ಮಹಿಳೆಯಾಗಿರಬೇಕು (ವಿವಾಹಿತ ಅಥವಾ ಏಕ ಮಹಿಳಾ ಒಡೆತನದ ಗೃಹಿಣಿ). ಮಾಜಿ ಯೋಧರು, ವಿಧುರರು, ಅಂಗವಿಕಲರು ಮತ್ತು ಹಿರಿಯ ನಾಗರೀಕರಾಗಿದ್ದಲ್ಲಿ ಪುರುಷರು ಸಹ ಅರ್ಹರಾಗಿರುತ್ತಾರೆ.

- ಅರ್ಜಿದಾರರ ಕುಟುಂಬವು ಅರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿದ್ದು, ವಾರ್ಷಿಕ ಆದಾಯ ರೂ.1,20,000/–ಕ್ಕಿಂತ ಕಡಿಮೆ ಇರಬೇಕು

- ಅರ್ಜಿದಾರರ ಕುಟುಂಬವು ವಸತಿರಹಿತರಾಗಿದ್ದು, ಅರ್ಜಿದಾರರು ಅಥವಾ ಕುಟುಂಬದ ಯಾವುದೇ ಸದಸ್ಯರ ಹೆಸರಿನಲ್ಲಿ ಕರ್ನಾಟಕದ ಯಾವುದೇ ಭಾಗದಲ್ಲಿ ಸ್ವಂತ ಮನೆಯನ್ನು ಹೊಂದಿರಬಾರದು. ಶಿಥಿಲಗೊಂಡ ಮನೆ ಅಥವಾ ಗುಡಿಸಲಿನಲ್ಲಿ ವಾಸಿಸುತ್ತಿರುವವರು ಅರ್ಹರಾಗಿರುತ್ತಾರೆ.

- ಅರ್ಜಿದಾರರು ಸ್ವಂತ ನಿವೇಶನ ಹೊಂದಿದ್ದು, ನಿವೇಶನಕ್ಕೆ ಸಂಬಂಧಿಸಿದಂತೆ ಖಾತೆ ಹೊಂದಿರಬೇಕು.(ಪಾರಂಪರಿಕ ಅರಣ್ಯ ಹಕ್ಕುಗಳ ಕಾಯ್ದೆಯನ್ವಯ ಜಿಲ್ಲಾ ಸಮಿತಿಯಿಂದ ನೀಡಲಾದ ಹಕ್ಕುಪತ್ರ ಪಡೆದಿದ್ದಲ್ಲಿ ವಸತಿ ಸೌಕರ್ಯ ಪಡೆಯಲು ಪರಿಗಣಿಸಬಹುದಾಗಿದೆ.

- ಬೇರೆ ಯಾವುದೇ ಯೋಜನೆ/ಇಲಾಖೆಯಿಂದ ಈಗಾಗಲೇ ವಸತಿ ಸೌಲಭ್ಯ ಪಡೆದಿರಬಾರದು.

- ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾ)ಯಡಿ ವಸತಿ ಸೌಲಭ್ಯ ಪಡೆಯಲು ಕೇಂದ್ರ ಸರ್ಕಾರದಿಂದ ನೀಡಲಾದ ಸಾಮಾಜಿಕ ಆರ್ಥಿಕ ಮತ್ತು ಜಾರಿ ಜನಗಣತಿ 2011ರ ಪಟ್ಟಿಯಲ್ಲಿ ಹೆಸರು ಸೇರಿರಬೇಕು.

- ಡಾ॥ ಬಿ.ಆರ್. ಅಂಬೇಡ್ಕರ್ ವಸತಿ ಯೋಜನೆಯಡಿ ವಸತಿ ಸೌಲಭ್ಯ ಪಡೆಯಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿವರಾಗಿರವೇಕು, ಈ ವರ್ಗದ ವಸತಿ ರಹಿತರಿಗೆ ಸರ್ಕಾರದಿಂದ ನೀಡಲಾದ ವಾರ್ಷಿಕ ಗುರಿಯಲ್ಲಿ ವಸತಿ ಕಲ್ಪಿಸಲಾಗುವುದು.

## ಯೋಜನೆಗಳ ಸಂಕ್ಷಿಪ್ತ ಮಾಹಿತಿ:-

### ಅ. ಬಸವ ವಸತಿ ಯೋಜನೆ :-

ಇದು ರಾಜ್ಯ ಸರ್ಕಾರದ ಪ್ರಾಯೋಜಕತ್ವದ ಯೋಜನೆಯಾಗಿದ್ದು, ಗ್ರಾಮೀಣ ಪ್ರದೇಶದಲ್ಲಿ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ವಸತಿ ರಹಿತರಿಗೆ ವಸತಿ ಸೌಲಭ್ಯ ಕಲ್ಪಿಸಲಾಗುತ್ತಿದೆ. ಸರ್ಕಾರದ ಆದೇಶ ಸಂಖ್ಯೆ :ವಇ 142 ಹೆಚ್.ಎ.ಹೆದ್ 2021 ದಿನಾಂಕ :18.03.2022ರನ್ವಯ ಈ ಯೋಜನೆಯಡಿ ಫಲಾನುಭವಿಗಳ ವಾರ್ಷಿಕ ಅದಾಯ ಮಿತಿಯನ್ನು ರೂ. 1,20,000/- ನಿಗದಿಪಡಿಸಲಾಗಿದೆ. ಫಲಾನುಭವಿಗಳ ಆಯ್ಕೆಯನ್ನು ಗ್ರಾಮ ಪಂಚಾಯತಿಯ ಗ್ರಾಮ ಸಭೆಯ ಮೂಲಕ ವಸತಿ ರಹಿತ ಪಟ್ಟಿಯಿಂದ ಆಯ್ಕೆ ಮಾಡಲಾಗುತ್ತದೆ. ಸರ್ಕಾರದಿಂದ ಪ್ರತಿ ಮನೆಗೆ ಆರ್ಥಿಕ ಸಹಾಯಧನ ರೂ.1,20,000/- ಗಳಾಗಿರುತ್ತದೆ. 2017-18ನೇ ಸಾಲಿನಿಂದ ಸರ್ಕಾರವು ನೀಡಲಾದ ಗುರಿಯಲ್ಲಿ ಶೇ. 90 ರಷ್ಟು ಸಾಮಾನ್ಯ ವರ್ಗದವರಿಗೆ ಹಾಗೂ ಉಳಿದ ಶೇ. 10 ರಷ್ಟು ಅಲ್ಪಸಂಖ್ಯಾತರಿಗೆ ಮೀಸಲಿಡಲಾಗಿದೆ.

### ಆ. ಪ್ರದಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ) :-

ಇಂದಿರಾ ಆವಾಸ್ ಯೋಜನೆಯು ಕೇಂದ್ರ ಸರ್ಕಾರದ ಗ್ರಾಮೀಣಾಭಿವೃಧ್ಧಿ ಮಂತ್ರಾಲಯದ ಒಂದು ಫ್ಲಾಗ್‌ಶಿಪ್ ಯೋಜನೆಯಾಗಿದ್ದು, ಸರ್ಕಾರವು ಮೊದಲಿನಿಂದಲೂ ಪಕ್ಕಾ ಮನೆಯನ್ನು ನಿರ್ಮಿಸಿಕೊಳ್ಳಲು ಅಥವಾ ಸುರಕ್ಷಿತವಾದ ಮತ್ತು ಬಾಳಿಕೆ ಬರುವ ಮನೆಯನ್ನು ನಿರ್ಮಿಸಿಕೊಳ್ಳಲು ಅಸಮರ್ಥರಾಗಿರುವ ಬಡತನ ರೇಖೆಗಿಂತ ಕೆಳಗಿರುವ ಅರ್ಹ ಫಲಾನುಭವಿಗಳಿಗೆ ಆರ್ಥಿಕ ಸಹಾಯಧನ ನೀಡುತ್ತಿದೆ. ನಿಗಮವು ಈ ಯೋಜನೆಯನ್ನು 2004-05ನೇ ಸಾಲಿನಿಂದ

ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಮೊದಲು ಸದರಿ ಯೋಜನೆಯನ್ನು ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿತ್ತು.

ಈ ಯೋಜನೆಯಡಿ ಬಡತನ ರೇಖೆಗಿಂತ ಕೆಳಗಿರುವ ಫಲಾನುಭವಿಗಳನ್ನು ಸಮುದಾಯವು ಗ್ರಾಮ ಸಭೆಯ ಮೂಲಕ ಆಯ್ಕೆ ಮಾಡಲಾಗುತ್ತದೆ. ಈ ಯೋಜನೆಯ ಮಾರ್ಗಸೂಚಿಯಂತೆ ಸಹಾಯಧನವನ್ನು ಶೇ 60% ರಷ್ಟು ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಹಾಗೂ ಶೇ15% ರಷ್ಟು ಅಲ್ಪಸಂಖ್ಯಾತರಿಗೆ ಹಾಗೂ ಉಳಿದ ಶೇ 25% ಇತರೆ ವರ್ಗದವರಿಗೆ ಮೀಸಲಿಡಲಾಗಿದೆ. ಒಟ್ಟಾರೆ ಶೇ 3% ಅಂಗವಿಕಲರಿಗಾಗಿ ಮೀಸಲಿಡಲಾಗಿದೆ.

ಈ ಯೋಜನೆಯಡಿ ನೀಡಲಾಗುವ ಸಹಾಯಧನವನ್ನು ಶೇ 60:40 ರ ಅನುಪಾತದಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಭರಿಸುತ್ತಿವೆ. ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಪ್ರತಿ ಮನೆಯ ಘಟಕ ವೆಚ್ಚ ರೂ.1,20,000/-ಗಳಾಗಿರುತದೆ,ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಸಹಾಯಧನ ರೂ. 1.20 ಲಕ್ಷಗಳಿಗೆ ಮತ್ತು ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದರಿಗೆ ರೂ 1.75 ಲಕ್ಷಗಳನ್ನು ನಿಗದಿಪಡಿಸಿದ್ದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನೀಡುವ ಹೆಚ್ಚುವರಿ ರೂ.55,000/- ಸಹಾಯಧನವನ್ನು ರಾಜ್ಯ ಸರ್ಕಾರವೇ ಭರಿಸುತ್ತಿದೆ.

**ಇ. <u>ವಾಜಪೇಯಿ ನಗರ ವಸತಿ ಯೋಜನೆ :-</u>**

ಸರ್ಕಾರವು ನಗರ ಪ್ರದೇಶದಲ್ಲಿ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಹಿಂದುಳಿದ ವಸತಿ ರಹಿತರಿಗೆ ವಸತಿ ಸೌಕರ್ಯವನ್ನು ಕಲ್ಪಿಸುವುದಕ್ಕಾಗಿ 2010-11ನೇ ಸಾಲಿನಿಂದ ನಗರ ಆಶ್ರಯ ಯೋಜನೆಯ ಬದಲಾಗಿ ವಾಜಪೇಯಿ ನಗರ ವಸತಿ ಯೋಜನೆ ಎಂಬ ಹೊಸ ಯೋಜನೆಯನ್ನು ಜಾರಿಗೆ ತರಲಾಗಿರುತ್ತದೆ. ಈ ಯೋಜನೆಯಡಿ ಫಲಾನುಭವಿಗಳ ವಾರ್ಷಿಕ ಆದಾಯ ಮಿತಿಯನ್ನು ರೂ.2,00,000/- ನಿಗದಿಪಡಿಸಲಾಗಿದೆ. ಫಲಾನುಭವಿಗಳ ಆಯ್ಕೆಯನ್ನು ಮಾನ್ಯ ಶಾಸಕ ಅಧ್ಯಕ್ಷತೆಯಲ್ಲಿ ರಚಿಸಲಾದ ಆಶ್ರಯ ಸಮಿತಿಯ ಮೂಲಕ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು. ಸರ್ಕಾರದಿಂದ ಪ್ರತಿ ಮನೆಗೆ ಆರ್ಥಿಕ 1,20,000/- ಗಳಾಗಿರುತ್ತದೆ. 2017-18ನೇ ಸಾಲಿನಿಂದ ಸರ್ಕಾರವು ನೀಡಲಾದ ಗುರಿಯಲ್ಲಿ ಶೇ. 90 ರಷ್ಟು ಸಾಮಾನ್ಯ ವರ್ಗದವರಿಗೆ ಹಾಗೂ ಉಳಿದ ಶೇ. 10 ರಷ್ಟು ಅಲ್ಪಸಂಖ್ಯಾತರಿಗೆ ಮೀಸಲಿಡಲಾಗಿದೆ.

**ಈ. <u>ವಿಶೇಷ ವಸತಿ ಯೋಜನೆ :-</u>**

ಸರ್ಕಾರವು ವಿಶೇಷ ವಸತಿ ಯೋಜನೆಯಡಿ 2014-15ನೇ ಸಾಲಿನಿಂದ ಆಯವ್ಯಯದಲ್ಲಿ ಗುರಿ ನಿಗದಿಪಡಿಸುತ್ತಿದ್ದು, ಈ ಕೆಳಕಂಡ ವರ್ಗದವರಿಗೆ ವಸತಿ ಸೌಕರ್ಯವನ್ನು ಒದಗಿಸುತ್ತಿದೆ.

1. ರಸ್ತೆ ಬದಿ/ಅಂಗಡಿಗಳ ಜಗುಲಿಯಲ್ಲಿ ರಾತ್ರಿ ವೇಳೆ ಮಲಗುವ ನಿರ್ಗತಿಕರು
2. ವಿಕಲಚೇತನರು
3. ಕುಷ್ಠರೋಗದಿಂದ ಗುಣಮುಖರಾದವರು,
4. ಹೆಚ್.ಐ.ವಿ. ಸೋಂಕಿತರು,
5. ಮಂಗಳಮುಖಿಯರು,
6. ಲೈಂಗಿಕ ಕಾರ್ಯಕರ್ತೆಯರು,
7. ದೇವದಾಸಿಯರು,
8. ವಿಧವೆಯರು,
9. ಜೀತದಿಂದ ಮುಕ್ತರಾದವರು,

10. ಸಫಾಯಿ ಕರ್ಮಚಾರಿಗಳು,
11. ದೌರ್ಜನ್ಯಕ್ಕೊಳಗಾದವರು,
12. ಮತೀಯ ಗಲಭೆ ಹಾಗೂ ಚಳುವಳಿಗಳಿಂದ ಹಾನಿಗೊಳಗಾದವರು,
13. ಅಲಮಾರಿ ಜನಾಂಗದವರು,
14. ವಿಶೇಷ ವೃತ್ತಿಪರ ಗುಂಪುಗಳು.

ಈ ಮೇಲೆ ತಿಳಿಸಿದ ಗುಂಪಿನ ಅರ್ಹ ಫಲಾನುಭವಿಗಳನ್ನು ಗುರುತಿಸಿ, ಆಯ್ಕೆ ಮಾಡಿ ಹಾಗೂ ಅನುಮೋದನೆ ನೀಡಿ ವಸತಿ ಸೌಲಭ್ಯ ಒದಗಿಸಲು ಈ ಕೆಳಗಿನ ಸಮಿತಿಯನ್ನು ರಚಿಸಲಾಗಿದೆ.

| | |
|---|---|
| ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು | ಉಪಾಧ್ಯಕ್ಷರು |
| ವಸತಿ ನೋಡಲ್ ಅಧಿಕಾರಿ, ಜಿಲ್ಲಾ ಪಂಚಾಯತಿ | ಸದಸ್ಯರು |
| ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಷ, ಜಿಲ್ಲಾಧಿಕಾರಿಗಳ ಕಛೇರಿ | ಸದಸ್ಯರು |
| ಸಹಾಯಕ ಆಯುಕ್ತರು | ಸದಸ್ಯರು |
| ಆಯುಕ್ತರು/ಮುಖ್ಯಾಧಿಕಾರಿಗಳು ಎಲ್ಲ ನಗರ ಸ್ಥಳೀಯ ಸಂಸ್ಥೆಗಳು | ಸದಸ್ಯರು |
| ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಣಾಧಿಕಾರಿಗಳು | ಸದಸ್ಯರು |
| ಸಂಬಂಧ ಪಟ್ಟ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು | ಸದಸ್ಯ ಕಾರ್ಯದರ್ಶಿಗಳು |

**ಉ. <u>ಡಾ. ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆ :-</u>**

ಸರ್ಕಾರವು ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಹಿಂದುಳಿದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವರ್ಗದವರಿಗೆ ವಸತಿ ಸೌಕರ್ಯವನ್ನು ಕಲ್ಪಿಸುವುದಕ್ಕಾಗಿ 2015-16ನೇ ಸಾಲಿನಿಂದ ಡಾ.ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆಯನ್ನು ಜಾರಿಗೆ ತರಲಾಗಿರುತ್ತದೆ. ಈ ಯೋಜನೆಯಡಿ 2015-16,2016-17,2017-18, &2021-22ನೇ ಸಾಲಿನಿಂದ ನೀಡಲಾಗುವ ಘಟಕ ವೆಚ್ಚ ವಿವರ ಇಂತಿದೆ:

| **ಪ್ರದೇಶ** | **ಪ್ರತಿ ಮನೆಗೆ ಸಹಾಯಧನ (ರೂ.ಗಳಲ್ಲಿ)** | |
|---|---|---|
| | ಗ್ರಾಮೀಣ | ನಗರ |
| 2015-16 | 1,50,000/- | 1,80,000/- |
| 2016-17 | 1,50,000/- | 1,80,000/- |
| 2017-18 | 1,75,000/- | 2,00,000/- |
| 2021-22 | 2,00,000/- | 2,00,000/- |

**ಊ. <u>ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) ದ ಅನುಷ್ಠಾನ:</u>**

ಕೇಂದ್ರ ವಸತಿ ಮತ್ತು ನಗರ ವ್ಯವಹಾರ ಮಂತ್ರಾಲಯ, ಭಾರತ ಸರ್ಕಾರವು ನಗರದ ಸರ್ವರಿಗೂ ಸೂರು ಒದಗಿಸಲು ಉದ್ದೇಶಿಸಿ, ಜೂನ್ 2015 ರಂದು **ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ)** ಯನ್ನು ಜಾರಿಗೊಳಿಸಿದೆ.

ಸದರಿ ಅಭಿಯಾನದಡಿ ಈ ಕೆಳಕಂಡ ಯಾವುದೇ ಒಂದು ಘಟಕ ಅಡಿಯಲ್ಲಿ ಮನೆಯನ್ನು ಒದಗಿಸಬಹುದಾಗಿದೆ.

1. ಭೂಮಿಯನ್ನು ಸಂಪನ್ಮೂಲವನ್ನಾಗಿಸಿ ಕೊಂಡು "In-situ"ಮಾದರಿಯಲ್ಲಿ ಕೊಳಚೆ ಪ್ರದೇಶಗಳ ಪುನರ್ ಅಭಿವೃದ್ಧಿ
2. ಕ್ರೆಡಿಟ್ ಲಿಂಕ್ಡ್ ಸಬ್ಸಿಡಿ ಯೋಜನೆ .
3. ಅಫೋರ್ಡೆಬಲ್ ಹೌಸಿಂಗ್ ಇನ್ ಪಾರ್ಟ್‌ನರ್‌ಶಿಫ್
4. ಫಲಾನುಭವಿ ನೇತೃತ್ವದಲ್ಲಿ ಸ್ವಯಂ ಮನೆ ನಿರ್ಮಾಣ/ ವಿಸ್ತರಣೆ

ಈ ಯೋಜನೆಯನ್ನು ರಾಜ್ಯ ಸರ್ಕಾರದ ವಸತಿ ಯೋಜನೆಗಳಾದ ವಾಜಪೇಯಿ ನಗರ ವಸತಿ ಯೋಜನೆ ಡಾ॥ ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ ಮತ್ತು ದೇವರಾಜು ಅರಸು ವಿಶೇಷ ವಸತಿ ಯೋಜನೆ, ಪೌರ ಕಾರ್ಮಿಕ ಗೃಹ ಭಾಗ್ಯ, ಒಂಟಿ ಮನೆ ವಿವಿಧ ಯೋಜನೆಗಳೊಂದಿಗೆ ಸಮನ್ವಯಗೊಳಿಸಿ ಅನುಷ್ಠಾನಗೊಳಿಸಲು ನಅಇ 145 ಸಿಎಸ್ಎಸ್ 2015 ಬೆಂಗಳೂರು, ದಿನಾಂಕ 18.01.2016 ರಲ್ಲಿ ಆದೇಶ ಹೊರಡಿಸಿದೆ.

ಪ್ರಸ್ತುತ ಸದರಿ ಅಭಿಯಾನವನ್ನು ರಾಜ್ಯದ 280 ನಗರ ಸ್ಥಳೀಯ ಸಂಸ್ಥೆಗಳಲ್ಲಿ 2015 ರಿಂದ 2022 ರವರೆಗೆ ನಗರ ಪ್ರದೇಶ/ ಪ್ಲಾನಿಂಗ್ / ಇಂಡಸ್ಟ್ರೀಯಲ್ / ಸ್ಪೇಶಲ್ / ಡೆವೆಲಪ್ ಮೆಂಟ್ ಏರಿಯಾದಲ್ಲಿ ಅನುಷ್ಠಾನಗೊಳಿಸಲಾಗುವುದು.

ಸದರಿ ಸರ್ಕಾರದ ಆದೇಶದಂತೆ, ಫಲಾನುಭವಿಗಳ ವಾರ್ಷಿಕ ಆಧಾಯ ಮಾನದಂಡ ಈ ಕೆಳಕಂಡಂತೆ ನಿಗದಿಪಡಿಸಿದೆ.

- ಬಿ.ಪಿ.ಎಲ್. ಕುಟುಂಬ: ರೂ. 2,00,000/- ರವರೆಗೆ
- ಇ.ಡಬ್ಲ್ಯೂ.ಎಸ್ ಕುಟುಂಬ: ರೂ. 3,00,000/- ರವರೆಗೆ
- ಎಲ್.ಐ.ಜಿ ಕುಟುಂಬ: ರೂ. 3,00,000/- ರಿಂದ 6,00,000/-
- ಎಂ.ಐ.ಜಿ -1 ಕುಟುಂಬ ರೂ. 6,00,000/- ರಿಂದ 12,00,000/-
- ಎಂ.ಐ.ಜಿ -2 ಕುಟುಂಬ ರೂ. 12,00,000/- ರಿಂದ 18,00,000/-

ಈ ಅಭಿಯಾನದಡಿ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಪ್ರತಿ ಫಲಾನುಭವಿಗೆ ದೊರಕುವ ಅನುದಾನದ ವಿವರಗಳು ಈ ಕೆಳಕಂಡಂತಿವೆ.

| Sharing Pattern per Unit (Rs. in Lakhs) | | | | | | |
|---|---|---|---|---|---|---|
| **Sl. No.** | **Vertical** | **BPL HH** | | **EWS HH** | | **Carpet Area (sqmt)** |
| | | **GoI** | **GoK** | **GoI** | **GoK** | |
| 1 | In-situ Slum Redevelopment | 1.0 | 1.2 for Gen, 2.00 for SC/ST | 1.0 | 0.00 | 30 |
| 2 | AHP | 1.5 | | 1.5 | 0.00 | |
| 3.A | BLC (New) | 1.5 | | 1.5 | 0.00 | |
| 3.B | BLC (Enh) | Max | 0.00 | 1.5 | 0.00 | |

| | | | | | | |
|---|---|---|---|---|---|---|
| | | 1.5 | | | | |

ಕ್ರೇಡಿಟ್ ಲಿಂಕ್ಡ್ ಸಬ್ಸಿಡಿ ಯೋಜನೆ ಯನ್ನು ಬ್ಯಾಂಕ್ ಗಳು ಅನುಷ್ಠಾನಗೊಳಿಸುತ್ತಿವೆ.

ರಾಜ್ಯ ಸರ್ಕಾರವು ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತವನ್ನು ಈ ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ರಾಜ್ಯ ಮಟ್ಟದ ಉಸ್ತುವಾರಿ ಸಂಸ್ಥೆಯಾಗಿ ನೇಮಕ ಮಾಡಿದೆ. ಆರ್.ಜಿ.ಆರ್.ಎಚ್.ಸಿ.ಎಲ್, ಕೆ.ಎಸ್.ಡಿ.ಬಿ ಕೆ.ಎಚ್.ಬಿ ನಗರ ಸ್ಥಳೀಯ ಸಂಸ್ಥೆಗಳು, ನಗರಾಭಿವೃದ್ಧಿ ಪ್ರಾಧಿಕಾರಗಳು, ಮುಂತಾದವುಗಳನ್ನು ಅನುಷ್ಠಾನ ಸಂಸ್ಥೆಗಳಾಗಿ ಗುರುತಿಸಲಾಗಿದೆ.

**ಬೇಡಿಕೆ ಸಮೀಕ್ಷೆ:**

ಸದರಿ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಪ್ರತಿ ನಗರಗಳಲ್ಲಿ ವಸತಿಯ ಬೇಡಿಕೆಯ ಪ್ರಮಾಣ ಅಂದಾಜಿಸಲು 2016-17 & 2017-18 ನೆಯ ಸಾಲಿನಲ್ಲಿ ಸಮೀಕ್ಷೆಯನ್ನು ಕೈಗೊಳ್ಳಲಾಗಿದೆ.

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿರವರು ಕೊಳಚೆ ಪ್ರದೇಶಗಳಲ್ಲಿ ಮನೆ ಮನೆಗೆ ಭೇಟಿ ನೀಡಿ ಸಮೀಕ್ಷೆ ಕಾರ್ಯ ಕೈಗೊಂಡಿದ್ದು, ಕೊಳಚೆಯೇತರ ಪ್ರದೇಶಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳು ಹೊಸದಾಗಿ ಅರ್ಜಿಗಳನ್ನು ಆಹ್ವಾನಿಸಿ ವಸತಿ ರಹಿತ ಕುಟುಂಬಗಳ ಸಮೀಕ್ಷೆ ಕೈಗೊಂಡಿದ್ದಾರೆ. ಸಿ.ಎಸ್.ಸಿ ಸೆಂಟರ್ / ಸಿಟಿಜನ್ ಪೋರ್ಟಲ್ ಮೂಲಕ ಅರ್ಜಿ ಸ್ವೀಕೃತಗೊಂಡಿವೆ. ನಗರ ಪ್ರದೇಶಗಳಲ್ಲಿ ಎಪ್ರಿಲ್ 2021 ರ ಅಂತ್ಯಕ್ಕೆ ಒಟ್ಟು 14.04 ಮನೆಗಳಿಗೆ ಬೇಡಿಕೆ ಇದೆ.

**ಯೋಜನೆಗಳ ಕುರಿತು ಮಾಹಿತಿ:**

ಮೇ 2022 ರ ಅಂತ್ಯಕ್ಕೆ ಕೇಂದ್ರ ಸರ್ಕಾರವು ಸದರಿ ಅಭಿಯಾನದಡಿ ರೂ. 25636.78 ಕೋಟಿ ಅಂದಾಜು ವೆಚ್ಚದಲ್ಲಿ 491659 ಮನೆಗಳ ನಿರ್ಮಾಣಕ್ಕಾಗಿ 2725 ಯೋಜನೆಗಳಿಗೆ ಅನುಮೋದನೆ ನೀಡಿದೆ.

(Rs. In crores)

| Vertical | No of Project | No of DUs | Project Cost | GoI share | State share | IA / ULB Share | Ben. Share |
|---|---|---|---|---|---|---|---|
| AHP | 389 | 293163 | 18076.84 | 4397.45 | 4802.74 | 1755.16 | 7121.4 |
| BLC | 2336 | 198496 | 7559.97 | 2977.44 | 2105.19 | 4.77 | 2472.07 |
| **Total** | **2725** | 491659 | 25636.78 | 7374.89 | 6907.94 | 1759.93 | 9593.53 |

ಕೇಂದ್ರ ಸರ್ಕಾರವು ಸದರಿ ಅಭಿಯಾನದಡಿ ರೂ. 3651.91 ಕೋಟಿ ಮೊತ್ತವನ್ನು ಬಿಡುಗಡೆ ಮಾಡಿದೆ. 275377 ಮನೆಗಳ ಕಾಮಗಾರಿ ಪ್ರಗತಿಯಲ್ಲಿರುತ್ತದೆ 178884ಮನೆಗಳು ಪೂರ್ಣಗೊಂಡಿವೆ.

***ಖ. ಮುಖ್ಯ ಮಂತ್ರಿಗಳ ಗ್ರಾಮೀಣ ಮತ್ತು ಹಾಗೂ ಮುಖ್ಯ ಮಂತ್ರಿಗಳ ನಿವೇಶನ ಯೋಜನೆಗಳು :-***

ಕರ್ನಾಟಕ ಸರ್ಕಾರವು ನಿವೇಶನರಹಿತರಿಗೆ ನಿವೇಶನ ಸೌಲಭ್ಯವನ್ನು ಒದಗಿಸಲು ಪ್ರಮುಖ ಯೋಜನೆಗಳಾದ ಮುಖ್ಯ ಮಂತ್ರಿಗಳ ಗ್ರಾಮೀಣ ವಸತಿ ನಿವೇಶನ ಯೋಜನೆ ಹಾಗೂ ಮುಖ್ಯ ಮಂತ್ರಿಗಳ ನಗರ ನಿವೇಶನ ಯೋಜನೆಗಳನ್ನು ರಾಜ್ಯಾದ್ಯಂತ ಅನುಷ್ಠಾನಗೊಳಿಸಲಾಗುತ್ತಿದೆ. ಸರ್ಕಾರದಿಂದ ಅನುಷ್ಠಾನಗೊಳಿಸುತ್ತಿರುವ ವಸತಿ ಯೋಜನೆಗಳಡಿ ವಸತಿ ಸೌಕರ್ಯ ಪಡೆಯಲು ಫಲಾನುಭವಿಯು ಕಡ್ಡಾಯವಾಗಿ ನಿವೇಶನ

ಹೊಂದಿರಬೇಕೆಂಬ ಪೂರ್ವ ಷರತ್ತನ್ನು ವಿಧಿಸಲಾಗಿರುವುದರಿಂದ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಬಹಳಷ್ಟು ಫಲಾನುಭವಿಗಳು ವಸತಿ ಸೌಕರ್ಯ ಪಡೆಯಲು ಅರ್ಹರಾಗಿದ್ದರು ಸಹ ನಿವೇಶನ ಹೊಂದದೆ ಇರುವುದರಿಂದ ವಸತಿ ಸೌಲಭ್ಯದಿಂದ ವಂಚಿತರಾಗುತ್ತಿದ್ದಾರೆ. ಆದ್ದರಿಂದ ಈ ನಿವೇಶನರಹಿತರಿಗೆ ನಿವೇಶನ ಒದಗಿಸುವ ಸಂಬಂಧ ಸೂಕ್ತ ಸರ್ಕಾರಿ ಜಮೀನು ಗುರುತಿಸುವಿಕೆ ಅಥವಾ ಖಾಸಗಿ ಜಮೀನು ಖರೀದಿ ಮಾಡುವುದು ಅತ್ಯವಶ್ಯವಾಗಿದೆ. ಮುಂದುವರೆದು, ನಗರ ಪ್ರದೇಶಗಳಲ್ಲಿ ಬಹಳಷ್ಟು ಫಲಾನುಭವಿಗಳಗೆ ನಿವೇಶನ ಇಲ್ಲದಿರುವುದರಿಂದ ನಗರ ವಸತಿ ಯೋಜನೆಗಳಡಿ ನಿಗಮವು ನಿರೀಕ್ಷಿತ ಗುರಿ ಸಾಧಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ನಿಗಮವು ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ವಸತಿ ನಿವೇಶನಗಳನ್ನು ಹಂಚಿಕೆ ಮಾಡಲು ಹೆಚ್ಚಿನ ಗಮನಹರಿಸಬೇಕಾಗಿರುತ್ತದೆ.

ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ವಸತಿ ನಿವೇಶನ ಹಂಚಿಕೆ ಮಾಡಲು ಸರ್ಕಾರಿ ಜಮೀನಿಗೆ ಪ್ರಥಮ ಆದ್ಯತೆ ನೀಡಲಾಗಿದೆ. ವಸತಿಗೆ ಸೂಕ್ತವಾದ ಸರ್ಕಾರಿ ಜಮೀನು ಲಭ್ಯವಿಲ್ಲದ ಕಡೆಗಳಲ್ಲಿ ಮಾತ್ರ ಖಾಸಗಿ ಜಮೀನು ಖರೀದಿಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಜಮೀನು ಖರೀದಿ ಸಮಿತಿಯನ್ನು ರಚಿಸಲಾಗಿದ್ದು, ಆ ಮೂಲಕ ಖಾಸತಿ ಜಮೀನು ಖರೀದಿಗೆ ಕ್ರಮವಹಿಸಲಾಗುತ್ತಿದೆ. ಸರ್ಕಾರವು ಈ ಕೆಳಗಿನಂತೆ ದರ ನಿಗದಿಪಡಿಸಿ ಆದೇಶ ಹೊರಡಿಸಿದೆ.

| **ಕ್ರಮ ಸಂಖ್ಯೆ** | **ಪ್ರದೇಶ** | **ಮಾರ್ಗಸೂಚಿ ಬೆಲೆ** | **ಗರಿಷ್ಟ ದರ** |
|---|---|---|---|
| 1 | ಗ್ರಾಮೀಣ ಪ್ರದೇಶ | ನಾಲ್ಕು ಪಟ್ಟು | ರೂ.9.00 ಲಕ್ಷಗಳು |
| 2 | ಪಟ್ಟಣ ಪಂಚಾಯತಿ | ಮೂರು ಪಟ್ಟು | ರೂ.12.00 ಲಕ್ಷಗಳು |
| 3 | ಪುರಸಭೆ | | ರೂ.15.00 ಲಕ್ಷಗಳು |
| 4 | ನಗರಸಭೆ | | ರೂ.22.50 ಲಕ್ಷಗಳು |
| 5 | ಮಹಾನಗರ ಪಾಲಿಕೆ | | ರೂ.37.50 ಲಕ್ಷಗಳು |
| 6 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | | ರೂ.75.00 ಲಕ್ಷಗಳು |

## ಎ. 1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ:–

ಬೆಂಗಳೂರು ನಗರದಲ್ಲಿ ವಾಸಿಸುತ್ತಿರುವ ಆರ್ಥಿಕವಾಗಿ ಹಿಂದುಳಿದ ದುರ್ಬಲ ವರ್ಗದವರಿಗಾಗಿ (Un-organized sector) ಸೂರನ್ನು ಕಲ್ಪಿಸಿಕೊಡುವ ಉದ್ದೇಶದಿಂದ ಕರ್ನಾಟಕ ಸರ್ಕಾರವು "1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ"ಯನ್ನು ಜಾರಿಗೊಳಿಸಿದೆ. ಸದರಿ ಯೋಜನೆಯಡಿ 1 ಲಕ್ಷ ಬಹುಮಹಡಿ ಮನೆಗಳ ಪೈಕಿ ಮೊದಲನೇ ಹಂತದಲ್ಲಿ 46,499 ಬಹುಮಹಡಿ ಮನೆಗಳನ್ನು ಮೂಲಭೂತ ಸೌಲಭ್ಯಗಳೊಂದಿಗೆ ರೂ.4,475.57 ಕೋಟಿಗಳ ವೆಚ್ಚದಲ್ಲಿ ನಿರ್ಮಾಣ ಮಾಡಲು ಸರ್ಕಾರದ ಆದೇಶ ಸಂಖ್ಯೆ 24.11.2018 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರಕಿರುತ್ತದೆ. ಅದರಂತೆ ಸದರಿ 46,499 ಬಹುಮಹಡಿ ಮನೆಗಳನ್ನು ಮೂಲಭೂತ ಸೌಲಭ್ಯಗಳೊಂದಿಗೆ ನಿರ್ಮಿಸಲು 9 ಪ್ಯಾಕೇಜ್‌ಗಳಲ್ಲಿ ಟೆಂಡರ್ ಆಹ್ವಾನಿಸಲಾಗಿತ್ತು. ಈ ಪೈಕಿ ಆರು ಪ್ಯಾಕೇಜ್‌ಗಳಲ್ಲಿ ಬರುವ 28,754 ಬಹುಮಹಡಿ (ಜಿ+3 ಇಂದ ಎಸ್+14) ಮನೆಗಳ

ನಿರ್ಮಾಣ ಕಾಮಗಾರಿಯನ್ನು ಮೂಲಭೂತ ಸೌಲಭ್ಯಗಳೊಂದಿಗೆ ರೂ.3035.09 ಕೋಟಿಗಳ ಮೊತ್ತದಲ್ಲಿ ನಿರ್ಮಿಸಲು (Lumpsum contract) SLECAH ಮತ್ತು ಸರ್ಕಾರದ ಅನುಮೋದನೆಯೊಂದಿಗೆ ಗುತ್ತಿಗೆದಾರರಿಗೆ ವಹಿಸಿದೆ. ಸದರಿ 28,754 ಬಹುಮಹಡಿ ಮನೆಗಳನ್ನು ಪ್ರಾರಂಭಿಸಲು ಗುತ್ತಿಗೆದಾರರಿಗೆ ಜಮೀನನ್ನು ಹಸ್ತಾಂತರಿಸಲಾಗಿದ್ದು, ಪ್ರಾರಂಭಿಕ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. 28,754 ಬಹುಮಹಡಿ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಪ್ರಾರಂಭಿಸಲು ಗುತ್ತಿಗೆದಾರರು ಲೇಔಟ್ ನಕ್ಷೆ, ಕಟ್ಟಡ ನಕ್ಷೆ, NoC ಮತ್ತು ವಿನ್ಯಾಸಗಳನ್ನು ಸಲ್ಲಿಸುತ್ತಿದ್ದಾರೆ. ಸದರಿ ಲೇಔಟ್ ಮತ್ತು ಕಟ್ಟಡ ನಕ್ಷೆಗಳಿಗೆ ಶಾಸನಬದ್ಧ ಅನುಮೋದನೆಗಾಗಿ ವಿವಿಧ ಯೋಜನಾ ಪ್ರಾಧಿಕಾರಗಳಿಗೆ ಸಲ್ಲಿಸಲಾಗುತ್ತಿದೆ ಹಾಗೂ ಉಳಿದ ಮೂರು ಪ್ಯಾಕೇಜುಗಳ ಪೈಕಿ ಎರಡು ಪ್ಯಾಕೇಜ್‌ಗಳಲ್ಲಿ ಬರುವ 15,113 ಬಹುಮಹಡಿ ಮನೆಗಳನ್ನು ಮೂಲಭೂತ ಸೌಲಭ್ಯಗಳೊಂದಿಗೆ ರೂ. 1709.81 ಕೋಟಿಗಳ ಮೊತ್ತದಲ್ಲಿ ನಿರ್ಮಾಣ ಮಾಡಲು ಗುತ್ತಿಗೆದಾರರಿಗೆ ದಿನಾಂಕ:20.02.2020 ರಂದು LOA ನೀಡಲಾಗಿದ್ದು, ಗುತ್ತಿಗೆದಾರರು ಶಾಸನಬದ್ಧ ಅನುಮೋದನೆಗಾಗಿ ಲೇಔಟ್ ನಕ್ಷೆಗಳನ್ನು ಮತ್ತು ಕಟ್ಟಡ ನಕ್ಷೆಗಳನ್ನು ತಯಾರಿಸುತ್ತಿರುತ್ತಾರೆ, ಉಳಿದ 2632 ಬಹುಮಹಡಿ ಮನೆಗಳ ಪರಿಷ್ಕೃತ ಅಂದಾಜು ಪಟ್ಟಿ ತಯಾರಿಕೆ ಹಂತದಲ್ಲಿದೆ.

ಎರಡನೇ ಹಂತದಲ್ಲಿ ಉಳಿದ 53,501 ಬಹುಮಹಡಿ ಮನೆಗಳನ್ನು (ಜಿ+3) ಮಾದರಿಯಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ ನಿರ್ಮಿಸಲು 205 ಎಕರೆ 20 ಗುಂಟೆ ವಾಸಯೋಗ್ಯ ಜಮೀನನ್ನು ಅಂತಿಮಗೊಳಿಸಿದ್ದು, ಸದರಿ ಜಮೀನಿನಲ್ಲಿ 19,650 (ಜಿ+3) ಮನೆಗಳನ್ನು ನಿರ್ಮಾಣ ಮಾಡಲು ಯೋಜನಾ ವರದಿಗಳನ್ನು ತಯಾರಿಸಲಾಗುತ್ತಿದೆ.

2019-20ನೇ ಸಾಲಿನಲ್ಲಿ ಸುಮಾರು 49615 ಫಲಾನುಭವಿಗಳು ಮನೆಗಳ ಬೇಡಿಕೆಗಾಗಿ ನಿಗಮಕ್ಕೆ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಿರುತ್ತಾರೆ.

## ಯೋಜನೆ ಅನುಷ್ಠಾನದ ವಿಧಾನ :–

ಗುರಿ ನಿಗದಿಪಡಿಸುವಿಕೆ

↓

ವಸತಿರಹಿತ, ನಿವೇಶನ ರಹಿತ ಮತ್ತು ಗುಡಿಸಲು ವಾಸಿಗಳ ಮಾಹಿತಿ ಸೇರ್ಪಡೆ

↓

ಗ್ರಾಮ ಸಭೆಯಲ್ಲಿ ಫಲಾನುಭವಿಗಳ ಆಯ್ಕೆ

↓

ಗ್ರಾಮ ಸಭೆಯಲ್ಲಿ ಆಯ್ಕೆಯಾದ ಫಲಾನುಭವಿಗಳನ್ನು ನಮೂದಿಸುವುದು ಮತ್ತು ಅವರ ಖಾಲಿ ನಿವೇಶನಗಳನ್ನು ಜಿ.ಪಿ.ಎಸ್ ಮಾಡುವುದು

↓

ತಾಲ್ಲೂಕು ಪಂಚಾಯತಿಯಲ್ಲಿ ಫಲಾನುಭವಿಗಳ ಪಟ್ಟಿ ಪರಿಶೀಲನೆ ಹಾಗೂ ಠರಾವು ಪ್ರತಿಯನ್ನು ಸ್ಕ್ಯಾನ್ ಮಾಡಿ ಅಪ್ಲೋಡ್ ಮಾಡುವುದು ಮತ್ತು ಅನುಮೋದನೆ ನಮೂನೆ–17ನ್ನು ತಯಾರಿಸುವುದು

↓

ಜಿಲ್ಲಾ ಪಂಚಾಯತಿಯಲ್ಲಿ ಮುಖ್ಯಕಾರ್ಯನಿರ್ವಹಣಾಧಿಕಾರಿಯವರಿಂದ ನಮೂನೆ–17 ಪರಿಶೀಲಿಸಿ D.S.C (Digital signature Certificate)ಆನ್‌ಲೈನ್ ಮೂಲಕ ನಿಗಮಕ್ಕೆ ರವಾನಿಸುವುದು

↓

ನಿಗಮದಿಂದ ಫಲಾನುಭವಿ ಪಟ್ಟಿಯನ್ನು (ನಮೂನೆ–17) D.S.C (Digital signature Certificate) ಮೂಲಕ ಆನ್‌ಲೈನ್‌ನಲ್ಲಿ ಅಂತಿಮ ಅನುಮೋದನೆ ನೀಡುವುದು

↓

ನಿಗಮದಿಂದ ಸಂಬಂಧ ಪಟ್ಟ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿ.ಪಂ ಕಾರ್ಯನಿರ್ವಹಣಾಧಿಕಾರಿ ತಾ.ಪಂ, ಪಿ.ಡಿ.ಓ ಗ್ರಾ.ಪಂ ಮತ್ತು ಫಲಾನುಭವಿಗಳಿಗೆ ಎಸ್.ಎಂ.ಎಸ್ ಮೂಲಕ ತಿಳಿಸಲಾಗುವುದು ಹಾಗೂ ಫಲಾನುಭವಿವಾರು ಮನೆ ಮಂಜೂರಾತಿ ಮತ್ತು ಕಾಮಗಾರಿ ಆದೇಶ (ನಮೂನೆ–9) ಆನ್‌ಲೈನ್ ಲಭ್ಯವಿರುವುದು.

↓

| | |
|---|---|
| ನಿಗಮವು Core Bankingವ್ಯವಸ್ಥೆಯಡಿ ಫಲಾನುಭವಿವಾರು ಖಾತೆಗಳನ್ನು ತೆರೆಯುತ್ತದೆ. | ಪಿ.ಡಿ.ಓ ಅವರಿಂದ ಜಿ.ಪಿ.ಎಸ್ ಆಧಾರಿತ ಭೌತಿಕ ಪ್ರಗತಿ |

| | |
|---|---|
| ಫಲಾನುಭವಿವಾರು ಖಾತೆಗಳ ಮಾಹಿತಿಯನ್ನು ನಿಗಮದ ವೆಬ್‌ಸೈಟ್ ಮತ್ತು ಎಸ್.ಎಂ.ಎಸ್ ಮೂಲಕ ತಿಳಿಸಲಾಗುವುದು ಅದನ್ನು ಗ್ರಾಪಂ ಅಭಿವೃದ್ಧಿ ಅಧಿಕಾರಿಯು ಸಂಭಂಧಪಟ್ಟ ಫಲಾನುಭವಿಗಳಿಗೆ ಕೆ.ವೈ.ಸಿ ನಿಯಮಾವಳಿಗಳನ್ನು ಬ್ಯಾಂಕ್ ಶಾಖೆಗಳಲ್ಲಿ ಪೂರೈಸುವುದು. | ನಿಗಮದವತಿಯಲ್ಲಿ ಪ್ರತಿ ಹಂತದ ಜಿ.ಪಿ.ಎಸ್ ಆಧಾರಿತ ಭೌತಿಕ ಪ್ರಗತಿಯ ಛಾಯಾಚಿತ್ರದ ಪರಿಶೀಲನೆ (Audit) → Audit ಆಧಾರದ ಮೇಲೆ ಫಲಾನುಭವಿಗಳ ಖಾತೆಗಳಿಗೆ ನೇರವಾಗಿ ಅನುದಾನ ವರ್ಗಾವಣೆ ಹಾಗೂ ಫಲಾನುಭವಿಗಳಿಗೆ SMSಮೂಲಕ ಸಂದೇಶ ರವಾನೆ |

## <u>ವಸತಿ ಯೋಜನೆಗಳ ಅನುಷ್ಠಾನದಲ್ಲಿ ಜಾರಿಗೆ ತರಲಾದ ಹೊಸ ಪದ್ಧತಿಗಳು :–</u>

ವಸತಿ ಯೋಜನೆಗಳ ಅನುಷ್ಠಾನದಲ್ಲಿ ಈ ಕೆಳಕಂಡ ಹೊಸ ಪದ್ಧತಿಗಳನ್ನು ನಿಗಮವು ಅಳವಡಿಸಿದೆ :

- **<u>ಸ್ವಯಂಚಾಲಿತ ಭೌಗೋಳಿಕ ಮಾಹಿತಿ ವ್ಯವಸ್ಥೆ (GIS) ಆಧಾರದ ಮೇಲೆ ಪ್ರಗತಿ ಪರಿಶೀಲನೆ :–</u>** ವಸತಿ ಯೋಜನೆಗಳಡಿ ಫಲನುಭವಿಗಳು ನಿರ್ಮಿಸುವ ಮನೆಗಳನ್ನು ಜಿಪಿಎಸ್ ಆಧಾರಿತ ಮೊಬೈಲ್ ಮೂಲಕ ಆನ್‌ಲೈನ್‌ನಲ್ಲಿ ಅಳವಡಿಸಲಾಗುತ್ತಿದೆ. ಈ ಮನೆಗಳನ್ನು ಸ್ವಯಂಚಾಲಿತ ಭೌಗೋಳಿಕ ಮಾಹಿತಿ ವ್ಯವಸ್ಥೆ (GIS)ಆಧಾರದ ಮೇಲೆ ಪ್ರಗತಿ ಪರಿಶೀಲನೆ ಮಾಡುವ ತಂತ್ರಾಂಶವನ್ನು ಅಳವಡಿಸಲಾಗುತ್ತಿದೆ.
- **<u>ಲಾಟರಿ ಮುಖಾಂತರ ಫಲಾನುಭವಿಗಳ ಆಯ್ಕೆ :–</u>** ಸರ್ಕಾರವು ತನ್ನ ಸುತ್ತೋಲೆ ಸಂಖ್ಯೆ : ವಇ 51 ಹೆಚ್‌ಎಹೆಚ್ 2013 ದಿನಾಂಕ 05.08.2013 ರನ್ವಯ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಬದಲಾವಣೆಯನ್ನು ತಂದಿದೆ, ಅದು 'ಲಾಟರಿ ಮುಖಾಂತರ ಫಲಾನುಭವಿಗಳ ಆಯ್ಕೆ'. ಸ್ಥಳೀಯ ಸಂಸ್ಥೆಗಳು ತಮಗೆ ನಿಗದಿಪಡಿಸಿದ ಗುರಿಯನ್ನು ವರ್ಗವಾರು ವಿಂಗಡಿಸುವುದು. ನಿಗದಿಪಡಿಸಿದ ಗುರಿಗಿಂತ ಹೆಚ್ಚು ಅರ್ಹ ಫಲಾನುಭವಿಗಳಿದ್ದಲ್ಲಿ, ಅಂತಹ ಸಂಧರ್ಬದಲ್ಲಿ ಫಲಾನುಭವಿಗಳನ್ನು ಗ್ರಾಮ ಸಭಾ / ಆಶ್ರಯ ಸಮಿತಿಯಲ್ಲಿ ಲಾಟರಿ ಮೂಲಕ ಆಯ್ಕೆ ಮಾಡುವುದು. ಫಲಾನುಭವಿಗಳ ಆಯ್ಕೆಯಲ್ಲಿ ಪಾರದರ್ಶಕತೆಯನ್ನು ಕಾಪಾಡಲು, ಇಡೀ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯನ್ನು ವಿಡಿಯೋ ಚಿತ್ರೀಕರಣ ಮಾಡುವುದು.

- **<u>ಖಾಲಿ ನಿವೇಶನದ ಜಿಪಿಎಸ್ ದೃಢೀಕರಣ:–</u>** ಸ್ಥಳೀಯ ಸಂಸ್ಥೆಗಳ ಮೂಲಕ ಫಲಾನುಭವಿಗಳ ಆಯ್ಕೆಯಾದ ನಂತರ, ಪಿಡಿಓ / ಇಂಜಿನಿಯರ್‌ಗಳು ಆಯ್ಕೆಯಾದ ಫಲಾನುಭವಿಗಳ ಖಾಲಿ ನಿವೇಶವನ್ನು ಜಿಪಿಎಸ್ ಮೂಲಕ ದೃಢೀಕರಿಸಬೇಕು. ವಸತಿ ಯೋಜನೆಯಡಿ ಫಲಾನುಭವಿಯಾಗಿ ಆಯ್ಕೆಯಾಗಲು ಫಲಾನುಭವಿಯು ಸ್ವಂತ ನಿವೇಶನವನ್ನು ಹೊಂದಿರಬೇಕು. ಈ ಪ್ರಕ್ರಿಯೆಯು ಫಲಾನುಭವಿಯ ಅರ್ಹತೆಯನ್ನು ದೃಢೀಕರಿಸುತ್ತದೆ. ಸ್ವಂತ ನಿವೇಶನ ಹೊಂದಿಲ್ಲದಿರುವ ಫಲಾನುಭವಿಯನ್ನು ಆಯ್ಕೆ ಪಟ್ಟಿಯಿಂದ ಕೈಬಿಡಲಾಗುವುದು.

- **<u>ಫಲಾನುಭವಿಗಳು ಆಯ್ಕೆಯಾಗಿರುವ ಗ್ರಾಮ ಸಭಾ / ನಗರ ಆಶ್ರಯ ಸಮಿತಿಯ ಠರಾವನ್ನು ಲಗತ್ತಿಸುವುದು :–</u>** ಖಾಲಿ ನಿವೇಶನ ಜಿಪಿಎಸ್ ದೃಢೀಕರಣದ ನಂತರ ಅರ್ಹ ಫಲಾನುಭವಿಗಳ ಪಟ್ಟಿಯನ್ನು ಗ್ರಾಮ ಸಭಾ / ನಗರ ಆಶ್ರಯ ಸಮಿತಿಯ ಠರಾವುವಿನೊಂದಿಗೆ ಗ್ರಾಮೀಣ ಪ್ರದೇಶಕ್ಕೆ ಸಂಬಂಧಿಸಿದಂತೆ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ನಗರ ಪ್ರದೇಶಕ್ಕೆ ಸಂಬಂಧಿಸಿದಂತೆ ಮುಖ್ಯಾಧಿಕಾರಿಗಳು / ಆಯುಕ್ತರು ಇವರು ನಿಗಮದ ವೆಬ್‌ಸೈಟಿನಲ್ಲಿ ನಮೂದಿಸಬೇಕು ಮತ್ತು ಫಲಾನುಭವಿಗಳ ಪಟ್ಟಿಯನ್ನು ಠರಾವಿನೊಂದಿಗೆ ತಾಳೆ ಮಾಡುವುದು. ಸರಿಹೊಂದಿದಲ್ಲಿ, ಅದನ್ನು ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಹಣಾಧಿಕಾರಿಗಳು ಅಥವಾ ಮುಖ್ಯಾಧಿಕಾರಿಗಳು / ಆಯುಕ್ತರು ಇವರು ಡಿಜಿಟಲ್ ಸಹಿಯೊಂದಿಗೆ ಅನುಮೋದಿಸುತ್ತಾರೆ. ವ್ಯತ್ಯಾಸ ಕಂಡುಬಂದಲ್ಲಿ ಅದನ್ನು ಪುನರ್ ಪರಿಶೀಲನೆಗೆ ಗ್ರಾಮ ಪಂಚಾಯಿತಿ / ನಗರ ಸ್ಥಳೀಯ ಸಂಸ್ಥೆಗಳಿಗೆ ಕಳುಹಿಸಲಾಗುವುದು.

- **<u>ಫಲಾನುಭವಿಗಳ ಪಟ್ಟಿಗೆ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ಡಿಜಿಟಲ್ ಸಹಿಯೊಂದಿಗೆ ಆನ್‌ಲೈನ್ ಮೂಲಕ ಅನುಮೋದನೆ :–</u>** ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಮುಖ್ಯಾಧಿಕಾರಿಗಳು / ಆಯುಕ್ತರು ಇವರುಗಳಿಂದ ಅನುಮೋದನೆಗೊಂಡ ಫಲಾನುಭವಿಗಳ ಪಟ್ಟಿಯನ್ನು ಜಿಲ್ಲಾಡಳಿತದ ಅನುಮೋದನೆಗಾಗಿ ಆನ್‌ಲೈನ್ ಮೂಲಕವೇ ಕಳುಹಿಸಲಾಗುವುದು. ಜಿಲ್ಲಾಡಳಿತವು ಪರಿಶೀಲನೆಯ ನಂತರ ಫಲಾನುಭವಿಗಳ ಪಟ್ಟಿಯನ್ನು ಡಿಜಿಟಲ್ ಸಹಿಯೊಂದಿಗೆ ಆನ್‌ಲೈನ್ ಮೂಲಕ ಅನುಮೋದನೆ ಮಾಡಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ಅಂತಿಮ ಅನುಮೋದನೆಗಾಗಿ ಆನ್‌ಲೈನ್ ಮೂಲಕವೇ ಸಲ್ಲಿಸುತ್ತದೆ. ನಿಗಮವು 24 ಗಂಟೆಯೊಳಗೆ ಸದರಿ ಫಲಾನುಭವಿಗಳ ಪಟ್ಟಿಗೆ ಡಿಜಿಟಲ್ ಸಹಿಯೊಂದಿಗೆ ಅನುಮೋದನೆಯನ್ನು ನೀಡುತ್ತದೆ. ಈ ಹಿಂದೆ ತಾಲ್ಲೂಕು ಪಂಚಾಯಿತಿಗಳು / ನಗರ ಸ್ಥಳೀಯ ಸಂಸ್ಥೆಗಳು ನಿಗಮಕ್ಕೆ ಖುದ್ದಾಗಿ ಬಂದು ಅನುಮೋದನೆಯನ್ನು ಪಡೆಯಬೇಕಾಗಿತ್ತು. ಜಿಲ್ಲೆಯಿಂದ ನಿಗಮಕ್ಕೆ ಬರಲು ವ್ಯಯವಾಗುತ್ತಿದ್ದ ಸಮಯ ಹಾಗೂ ವೆಚ್ಚ ಎರಡನ್ನೂ ಈ ಹೊಸ ಪ್ರಕ್ರಿಯೆಯು ಕಡಿತಗೊಳಿಸಿದೆ.

- **<u>ಫಲಾನುಭವಿಗಳ ಪಟ್ಟಿಯ ಅನುಮೋದನೆಯ ಕುರಿತು ಅನುಷ್ಠಾನಾಧಿಕಾರಿಗಳಿಗೆ ಮಾಹಿತಿ:–</u>**ನಿಗಮದಿಂದ ಫಲಾನುಭವಿಗಳ ಪಟ್ಟಿಗೆ ಅನುಮೋದನೆ ನೀಡಿದ ಕೂಡಲೇ ಸಂಬಂಧಪಟ್ಟ ಎಲ್ಲಾ ಅನುಷ್ಠಾನಾಧಿಕಾರಿಗಳಿಗೆ ಅಂದರೆ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಹಣಾಧಿಕಾರಿಗಳು, ಮುಖ್ಯಾಧಿಕಾರಿಗಳು / ಆಯುಕ್ತರು, ಪಿಡಿಓಗಳಿಗೆ ಫಲಾನುಭವಿಗಳ ಪಟ್ಟಿಗೆ ಅನುಮೋದನೆಯನ್ನು ನೀಡಲಾಗಿದೆ ಎಂಬ ಮಾಹಿತಿಯನ್ನು ಎಸ್‌ಎಮ್‌ಎಸ್ ಮೂಲಕ ತಿಳಿಸಲಾಗುವುದು.

- **<u>ಆಯ್ಕೆಯಾದ ಫಲಾನುಭವಿಗಳಿಗೆ ಮಾಹಿತಿ :–</u>** ನಿಗಮದಿಂದ ಫಲಾನುಭವಿಗಳ ಪಟ್ಟಿಗೆ ಅನುಮೋದನೆ ನೀಡಿದ ಕೂಡಲೇ ಸಂಬಂಧಪಟ್ಟ ಎಲ್ಲಾ ಅನುಷ್ಠಾನಾಧಿಕಾರಿಗಳೊಂದಿಗೆ ಆಯ್ಕೆಯಾದ ಫಲಾನುಭವಿಗಳಿಗೆ ಅವರು ವಸತಿ ಯೋಜನೆಯಡಿ ಫಲಾನುಭವಿಯಾಗಿ ಆಯ್ಕೆಯಾಗಿರುತ್ತಾರೆ ಹಾಗೂ ಸ್ಥಳೀಯ ಸಂಸ್ಥೆಗಳಿಂದ ಕಾಮಗಾರಿ ಆದೇಶವನ್ನು ಪಡೆಯುವಂತೆ ಮಾಹಿತಿಯನ್ನು ಎಸ್‌ಎಮ್‌ಎಸ್ ಮೂಲಕ ತಿಳಿಸಲಾಗುವುದು. ಅನುಮೋದನೆಯಿಲ್ಲದೆ, ಬ್ಯಾಂಕ್ ಖಾತೆಯ ತೆರೆದಿರುವ ಬಗ್ಗೆ, ಪ್ರಗತಿವಾರು ಬಿಡುಗಡೆಯಾದ ಅನುದಾನ, ತಿರಸ್ಕೃತ / ಅನುದಾನ ಬಿಡುಗಡೆಯಾಗಿರುವುದಕ್ಕೆ ಕಾರಣ, ಇತರೆ ಮಾಹಿತಿಗಳನ್ನು ಕೂಡ ಎಸ್‌ಎಮ್‌ಎಸ್ ಮೂಲಕ ತಿಳಿಸಲಾಗುವುದು. ಇದು ಫಲಾನುಭವಿ ಸ್ನೇಹಿ ಪ್ರಕ್ರಿಯೆಯಾಗಿದ್ದು, ಫಲಾನುಭವಿಯು ತನ್ನ ಅರ್ಜಿಯ ವಸ್ತುಸ್ಥಿತಿಯನ್ನು ತಿಳಿಯಲು ಪದೇ ಪದೇ ಅನುಷ್ಠಾನಾಧಿಕಾರಿಗಳ ಕಛೇರಿಗೆ ಭೇಟಿ ನೀಡುವ ಅವಶ್ಯಕತೆ ಇರುವುದಿಲ್ಲ.

- **<u>ಕಾಮಗಾರಿ ಆದೇಶವನ್ನು ಆನ್‌ಲೈನ್‌ನಲ್ಲಿ ಮುದ್ರಿಸುವುದು :–</u>** ನಿಗಮದಿಂದ ಫಲಾನುಭವಿಗಳ ಪಟ್ಟಿಗೆ ಅನುಮೋದನೆ ನೀಡಿದಾಕ್ಷಣ, ಫಲಾನುಭವಿವಾರು ಕಾಮಗಾರಿ ಆದೇಶವು ಆನ್‌ಲೈನ್ ತಯಾರಾಗುವುದು. ಸದರಿ ಆದೇಶವನ್ನು ಸ್ಥಳೀಯ ಸಂಸ್ಥೆಗಳು ಮುದ್ರಿಸಿ, ಅನುಮೋದನೆ ನೀಡಿದ 3 ದಿನಗಳೊಳಗೆ ಫಲಾನುಭವಿಗಳಿಗೆ ವಿತರಿಸಲಾಗುವುದು. ಈ ಹಿಂದೆ ಕಾಮಗಾರಿ ಆದೇಶವನ್ನು ಸ್ಥಳೀಯ ಸಂಸ್ಥೆಗಳು ಕೈಬರಹದಿಂದ ನೀಡುತ್ತಿದ್ದವು.

- **<u>ಜಿಪಿಎಸ್ ಆಧಾರಿತ ಪ್ರಗತಿ ವರದಿಯ ಆನ್‌ಲೈನ್ ನಮೂದು :–</u>** ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು / ನಗರ ಸ್ಥಳೀಯ ಸಂಸ್ಥೆಯ ಅಭಿಯಂತರರು ಪ್ರಗತಿಯನ್ನು ಜಿಪಿಎಸ್ ಆಧಾರಿತ ಮೊಬೈಲ್ ಮೂಲಕ ನಮೂದು ಮಾಡುತ್ತಾರೆ. ಜಿಪಿಎಸ್ ಮೊಬೈಲ್ ಮೂಲಕ ತೆಗೆಯುವ ಛಾಯಚಿತ್ರವೇ ಪ್ರಗತಿ ವರದಿಯ ನಮೂದು ಆಗುತ್ತದೆ. ಈ ಹಿಂದೆ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ, ಆ ನಂತರ ಕಛೇರಿಯಿಂದ ನಿಗಮದ ವೆಬ್‌ಸೈಟಿನಲ್ಲಿ ಪ್ರಗತಿಯನ್ನು ನಮೂದಿಸುತ್ತಿದ್ದರು. ಸದರಿ ಪ್ರಗತಿಯ ನಮೂದಿಸಿದ ನಂತರ ತಾಲ್ಲೂಕು ನೋಡಲ್ ಅಧಿಕಾರಿಗಳು ಪುನ: ಅದೇ ಸ್ಥಳಕ್ಕೆ ಹೋಗಿ ಜಿಪಿಎಸ್ ಮೊಬೈಲ್ ಮೂಲಕ ಛಾಯಾಚಿತ್ರವನ್ನು ತೆಗೆಯುತ್ತಿದ್ದರು. ಈ ಪ್ರಕ್ರಿಯೆಯಲ್ಲಿ ಇಬ್ಬರು ಅಧಿಕಾರಿಗಳು ಒಂದೇ ಮನೆಗೆ ಎರಡು ಬಾರಿ ಪರಿಶೀಲನೆಗೆ ವೀಕ್ಷಿಸುತ್ತಿದ್ದರು. ಜಿಪಿಎಸ್ ಆಧಾರಿತ ಪ್ರಗತಿ ವರದಿಯ ಆನ್‌ಲೈನ್ ಪದ್ಧತಿಯಲ್ಲಿ ಪಿಡಿಓ / ಇಂಜಿನೀಯರ್‌ಗಳು ಹಂತವಾರು ಪ್ರಗತಿಯ ಅಂದರೆ ತಳಪಾಯ, ಗೋಡೆಯ ಹಂತ, ಮೇಲ್ಛಾವಣಿ ಮತ್ತು ಪೂರ್ಣಗೊಂಡ ಛಾಯಾಚಿತ್ರವನ್ನು ತೆಗೆದು ಅದನ್ನು ಅಲ್ಲಿಂದಲೇ ನಿಗಮದ ವೆಬ್‌ಸೈಟಿನಲ್ಲಿ ನಮೂದು ಮಾಡುತ್ತಾರೆ. ಇದರಿಂದ ಪ್ರಗತಿಯ ಜಿಪಿಎಸ್ ಪರಿಶೀಲನೆ ಹಾಗೂ ಮನೆಯ ಹಂತವಾರು ಪ್ರಗತಿ ಎರಡೂ ನಿಗಮದ ವೆಬ್‌ಸೈಟಿನಲ್ಲಿ ಸಕಾಲಕ್ಕೆ ನಮೂದು ಆಗುತ್ತದೆ.

ನಿಗಮವು ಗ್ರಾಮೀಣ ಪ್ರದೇಶಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಗಳಿಗೆ ಮತ್ತು ನಗರ ಪ್ರದೇಶಕ್ಕೆ ಸಂಬಂಧಿಸಿದಂತೆ ನಗರ ಸ್ಥಳೀಯ ಸಂಸ್ಥೆಗಳ ಅಭಿಯಂತರರಿಗೆ ಆನ್ಲೈನಿನಲ್ಲಿ ಜಿ.ಪಿ.ಎಸ್. ಆಧಾರಿತ ಪ್ರಗತಿ ವರದಿಯನ್ನು ಇಂದೀಕರಿಸುವ (ಅಪ್ಡೇಟ್ ಮಾಡುವ) ಕಾರ್ಯವನ್ನು ನೀಡಲಾಗಿದೆ. ಈ ಮೇಲೆ ತಿಳಿಸಲಾದ ಎಲ್ಲಾ ಸಿಬ್ಬಂದಿಗಳಿಗೆ ನಿಗಮದಿಂದ ವ್ಯಾಪಕ ತರಬೇತಿ ನೀಡಲಾಗಿದೆ.

**ಫಲಾನುಭವಿಗಳ ಖಾತೆಗೆ ನಿಗಿದಿತ ಸಮಯಕ್ಕೆ ಸರಿಯಾಗಿ (ಜಸ್ಟ್ ಇನ್ ಟಾಯಂ) ಹಣದ ಬಿಡುಗಡೆ :-**

ನಿಗಮವು 'ಹಣದ ಇ-ವರ್ಗಾವಣೆ ಮತ್ತು ಹಣಬಳಕೆಯ ಆನ್‌ಲೈನ್ ಮೇಲ್ವಿಚಾರಣೆ ವ್ಯವಸ್ಥೆ' ಯ ಮುಂದಿನ ಹೆಜ್ಜೆಯಾಗಿ, ಫಲಾನುಭವಿಗಳ ಖಾತೆಗೆ ನೇರವಾಗಿ ಆನ್‌ಲೈನ್ ಮೂಲಕ ಹಣ ಬಿಡುಗಡೆಯ ವ್ಯವಸ್ಥೆಯನ್ನು ಜಾರಿಗೆ ತಂದಿದೆ. ಈ ಹಿಂದೆ ಗ್ರಾಮ ಪಂಚಾಯಿತಿಗಳಿಗೆ ಆನ್‌ಲೈನ್ ಮೂಲಕ ಹಣ ಬಿಡುಗಡೆಯಾಗುತ್ತಿತ್ತು. ಆನಂತರ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಅಕೌಂಟ್ ಪೇಯಿ ಚೆಕ್‌ನ್ನು ಫಲಾನುಭವಿಗೆ ನೀಡುತ್ತಿದ್ದರು. ಚೆಕ್ ನಗದೀಕರಣಕ್ಕೆ 7-10 ದಿನಗಳ ಕಾಲಾವಕಾಶ ಬೇಕಾಗುತ್ತಿತ್ತು. ಸಧ್ಯ, ನಿಗಮವು ಸ್ಥಳೀಯ ಸಂಸ್ಥೆಗಳು ನಮೂದು ಮಾಡುವ ಮನೆಗಳ ಪ್ರಗತಿಗನುಗುಣವಾಗಿ ಫಲಾನುಭವಿಗಳ ಖಾತೆಗೆ ನೇರವಾಗಿ ಹಣವನ್ನು ಬಿಡುಗಡೆ ಮಾಡುತ್ತಿದೆ. ಇದಕ್ಕಾಗಿ, ನಿಗಮವೇ ಫಲಾನುಭವಿವಾರು ಬ್ಯಾಂಕ್ ಖಾತೆಯನ್ನು ಕೇಂದ್ರೀಕೃತವಾಗಿ ತೆರೆಯುತ್ತಿದೆ ಮತ್ತು ಫಲಾನುಭವಿಗಳ ಬ್ಯಾಂಕ್ ಖಾತೆಯ ಸಂಖ್ಯೆಯನ್ನು ಅನುಷ್ಠಾನಾಧಿಕಾರಿಗಳಿಗೆ ತಿಳಿಸಲಾಗುತ್ತಿದೆ. ಇದರ ಪ್ರಮುಖ ಉಪಯೋಗವೇನೆಂದರೆ ನಿಗಮದ ಕಛೇರಿಯಲ್ಲಿ ಕುಳಿತುಕೊಂಡು ಸಾವಿರಾರು ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಒಂದೆರಡು ಗಂಟೆಗಳಲ್ಲಿಯೇ ಹಣ ವರ್ಗಾವಣೆ ಮಾಡಬಹುದು. ಈ ವ್ಯವಸ್ಥೆಯಲ್ಲಿ ಫಲಾನುಭವಿಗಳಿಗೆ ಹಣ ತಲುಪಬೇಕಾದರೆ ಹಣ ಹಲವಾರು ಹಂತಗಳನ್ನು ದಾಟಿ ಹೋಗಬಾಕಾಗಿಲ್ಲ. ನಿಗಮದಿಂದ ವರ್ಗಾವಣೆ ಮಾಡಿದ ತಕ್ಷಣವೇ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಹಣ ಜಮಾ ಆಗುವುದರಿಂದ ಈ ವ್ಯವಸ್ಥೆಯಲ್ಲಿ ಹಣ ತಲುಪುವಿಕೆಯಲ್ಲಿ ವಿಳಂಬವಾಗುವ ಪ್ರಶ್ನೆಯೇ ಇಲ್ಲ.

ಈ ಹಣ ಬಿಡುಗಡೆ ವ್ಯವಸ್ಥೆಯನ್ನು 2010-11ನೇ ಶ್ರೇಣಿಯಿಂದ ಎಲ್ಲಾ ವಸತಿ ಯೋಜನೆಗಳಿಗೆ 2014-15 ನೇ ವರ್ಷದಿಂದ ಅಳವಡಿಸಲಾಗಿದೆ.

**ವಿಜಿಲ್ ಆಪ್**

**ಸಕಾರದ ಆದೇಶ ಸಂಖ್ಯೆ:ವಇ 154 ಹೆಚ್‌ಎಎಂ 2019, ದಿನಾಂಕ :16.11.2019ರಲ್ಲಿ ವಿವಿಧ ವಸತಿ ಯೋಜನೆಗಳಡಿ ಆಯ್ಕೆಯಾಗಿರುವ ಫಲಾನುಭವಿಗಳ ಭೌತಿಕ ಪ್ರಗತಿಗೆ ಅನುಗುಣವಾಗಿ ಅನುದಾನ ಬಿಡುಗಡೆಗೆ ಸಿದ್ಧವಿರುವ ಮನೆಗಳಿಗೆ ಅನುದಾನ ಬಿಡುಗಡೆಗೊಳಿಸುವ ಸಂಬಂಧ ದಾಖಲೀಕರಣ ಮತ್ತು ವಾಸ್ತವಿಕ ಪರಿಶೀಲನಾ ವರದಿಯನ್ನು ಸಲ್ಲಿಸುವ ಸಲುವಾಗಿ ಪರಿಶೀಲನಾ ಸಮಿತಿಯನ್ನು ರಚನೆ ಮಾಡಲಾಗಿರುತ್ತದೆ. ಸದರಿ ಆದೇಶದನ್ವಯ ಗ್ರಾಮೀಣ ಪ್ರದೇಶದಲ್ಲಿ ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಲೆಕ್ಕಾಧಿಕಾರಿಗಳು ಹಾಗೂ ನಗರ ಪ್ರದೇಶದಲ್ಲಿ ಸಂಬಂಧಿಸಿದ ವಾರ್ಡ್‌ನ ಸ್ಥಳೀಯ ಸಂಸ್ಥೆಯ ವಸತಿ ಯೋಜನೆಯ ವಿಷಯ ನಿರ್ವಾಹಕರು ಮತ್ತು ಕರ ವಸೂಲಿಗಾರರು ನಿಗಮವು ಅಭಿವೃದ್ಧಿ ಪಡಿಸಿರುವ ವಸತಿ ವಿಜಿಲ್ ಮೊಬೈಲ್**

**ಆ್ಯಪ್(Housing Vigil Mobile App)ನಲ್ಲಿ ಲಭ್ಯವಾಗುವ ಮಾಹಿತಿ/ಚೆಕ್‌ಲಿಸ್ಟ್ ಆಧರಿಸಿ ಪ್ರತಿಯೊಬ್ಬ ಫಲಾನುಭವಿಯ ಮನೆಯ ಭೌತಿಕ ಸ್ಥಳ ಪರಿಶೀಲನೆಯನ್ನು ಮಾಡಿ ಪರಿಶೀಲನಾ ವರದಿಯನ್ನು ಸಂಬಂಧಿಸಿದ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ(ಗ್ರಾಮೀಣ) / ಪುರಸಭಾ ಮುಖ್ಯಾಧಿಕಾರಿಗಳಿಗೆ(ನಗರ) ಸಲ್ಲಿಸಬೇಕು. ಸದರಿ ವರದಿಯನ್ನು ತಮ್ಮ ಹಂತದಲ್ಲಿ ಪರಿಶೀಲಿಸಿದ ತಮ್ಮ ಸ್ಪಷ್ಟ ವರದಿಯನ್ನು ಜಿಲ್ಲಾ ಪಂಚಾಯತಿಯ ಮುಖ್ಯ**

ಕಾರ್ಯನಿರ್ವಾಹಕ ಅಧಿಕಾರಿಗಳಿಗೆ / ಜಿಲ್ಲಾಧಿಕಾರಿಗಳಿಗೆ ಸಲ್ಲಿಸಬೇಕು. ಸದರಿ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿ ತಮ್ಮ ಸ್ಪಷ್ಟ ಅಭಿಪ್ರಾಯದೊಂದಿಗೆ ಅಂತಿಮ ವರದಿಯು(ಎಲ್ಲಾ ಅಧಿಕಾರಿಗಳ ಸಹಿಯೊಂದಿಗೆ) ನಿಗಮಕ್ಕೆ ಸಲ್ಲಿಸುವುದು. **ನಿಗಮವು ಮೇಲ್ಕಂಡ ಸಮಿತಿಗಳು ಸಲ್ಲಿಸುವ ಮಾಹಿತಿ/ವರದಿಯನ್ನು ಕ್ರೋಢೀಕರಿ ಅಗತ್ಯ ದಾಖಲೆಗಳೊಂದಿಗೆ ಸರ್ಕಾರಕ್ಕೆ ಸಲ್ಲಿಸುವುದು. ಸ್ಥಳ ಪರಿಶೀಲನಾ ವರದಿಯಲ್ಲಿ ಅರ್ಹರಿರುವ ಫಲಾನುಭವಿಗಳಿಗೆ ಅನುದಾನ ಬಿಡುಗಡೆಗೆ ನಿಗಮದಿಂದ ಕ್ರಮವಹಿಸುವುದು ಹಾಗೂ ಅನರ್ಹರೆಂದು ಕಂಡುಬಂದ ಪ್ರಕರಣಗಳಲ್ಲಿ, ಅನರ್ಹ ಪ್ರಕರಣಗಳಿಗೆ ಕಾರಣರಾದ ಅಧಿಕಾರಿ/ನೌಕರರ ಹಾಗೂ ಅನರ್ಹ ಫಲಾನುಭವಿಗಳ ವಿರುದ್ಧ ಸಂಬಂಧಿಸಿದ ಪೋಲಿಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಿ ದುರುಪಯೋಗವಾದ ಅನುದಾನವನ್ನು ವಸೂಲಿ ಮಾಡಿ, ವಸೂಲಿ ಮಾಡಿದ ಅನುದಾನವನ್ನು ನಿಗಮಕ್ಕೆ ಭರಿಸಲು ಕ್ರಮ ವಹಿಸಲಾಗುತ್ತಿದೆ.**

ಸಕಾರದ ಆದೇಶ ಸಂಖ್ಯೆ : ವಇ 154 ಹೆಚ್ಎಎಂ 2019, ದಿನಾಂಕ : 16.11.2019ರಲ್ಲಿ ವಿವಿಧ ವಸತಿ ಯೋಜನೆಗಳಡಿ ಆಯ್ಕೆಯಾಗಿರುವ ಫಲಾನುಭವಿಗಳ ಭೌತಿಕ ಪ್ರಗತಿಗೆ ಅನುಗುಣವಾಗಿ ಅನುದಾನ ಬಿಡುಗಡೆಗೆ ಸಿದ್ಧವಿರುವ ಮನೆಗಳಿಗೆ ಅನುದಾನ ಬಿಡುಗಡೆಗೊಳಿಸುವ ಸಂಬಂಧ ದಾಖಲೀಕರಣ ಮತ್ತು ವಾಸ್ತವಿಕ ಪರಿಶೀಲನಾ ವರದಿಯನ್ನು ಸಲ್ಲಿಸುವ ಸಲುವಾಗಿ ಪರಿಶೀಲನಾ ಸಮಿತಿಯನ್ನು ರಚನೆ ಮಾಡಲಾಗಿರುತ್ತದೆ. ಗ್ರಾಮೀಣ ಭಾಗದಲ್ಲಿ ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಲೆಕ್ಕಾಧಿಕಾರಿಗಳು ಹಾಗೂ ನಗರ ಪ್ರದೇಶದಲ್ಲಿ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ನಿಗಮವು ಅಭಿವೃದ್ಧಿ ಪಡಿಸಿರುವ ವಸತಿ ವಿಜಿಲ್ ಮೊಬೈಲ್ ಆಪ್‌ನಲ್ಲಿ ಲಭ್ಯವಾಗುವ ಮಾಹಿತಿ/ಚೆಕ್‌ಲಿಸ್ಟ್ ಆಧರಿಸಿ ಪ್ರತಿಯೊಬ್ಬ ಫಲಾನುಭವಿಯ ಮನೆಯ ಸ್ಥಳ ಪರಿಶೀಲನೆಯನ್ನು ಮಾಡಿ ಪರಿಶೀಲನಾ ವರದಿಯನ್ನು ಸಂಬಂಧಿಸಿದ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ / ಪುರಸಭಾ ಮುಖ್ಯಾಧಿಕಾರಿಗಳಿಗೆ ಸಲ್ಲಿಸಿದ ವರದಿಯನ್ನು ತಮ್ಮ ಹಂತದಲ್ಲಿ ಪರಿಶೀಲಿಸಿದ ನಂತರ ತಮ್ಮ ಸ್ಪಷ್ಟ ವರದಿಯನ್ನು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ / ಜಿಲ್ಲಾಧಿಕಾರಿಗಳಿಗೆ ಸಲ್ಲಿಸಬೇಕು. ಸದರಿ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿ ತಮ್ಮ ಸ್ಪಷ್ಟ ಅಭಿಪ್ರಾಯದೊಂದಿಗೆ ಅಂತಿಮ ವರದಿಯು ನಿಗಮಕ್ಕೆ ಸಲ್ಲಿಕೆಯಾಗುತ್ತಿದ್ದು, ಸದರಿ ವರದಿಯ ಆಧಾರದ ಮೇಲೆ ನಿಗಮದ ಹಂತದಲ್ಲಿ ಅಂತಿಮವಾಗಿ ಪರಿಶೀಲಿಸಿ ಅರ್ಹ ಫಲಾನುಭವಿಗಳ ಖಾತೆಗೆ ನೇರವಾಗಿ ಅನುದಾನ ಬಿಡುಗಡೆಮಾಡಲು ಕ್ರಮವಹಿಸಲಾಗುತ್ತಿದೆ.

**ಆಶ್ರಯ ಸಾಲದ ವಸೂಲಾತಿ ಹಾಗೂ ಸಾಲ ಮನ್ನಾ:–**

ಸರ್ಕಾರವು "ನನ್ನ ಮನೆ ನನ್ನ ಸ್ವತ್ತು" ಎಂಬ ಹೊಸ ಯೋಜನೆಯನ್ನು ಜಾರಿಗೆ ತಂದಿದ್ದು, ಈ ಯೋಜನೆಯಡಿಯಲ್ಲಿಬಾಕಿ ಅಸಲನ್ನು ಒಂದೇ ಕಂತಿನಲ್ಲಿ ಮರುಪಾವತಿ ಮಾಡಿದಲ್ಲಿ ಅಂತಹ ಫಲಾನುಭವಿಗಳಿಗೆ ಬಡ್ಡಿಯನ್ನು ಮನ್ನಾ ಮಾಡುವುದಲ್ಲದೆ, ಅಂತಹ ಫಲಾನುಭವಿಗಳನ್ನು ಅಡಮಾನದಿಂದ ಬಿಡುಗಡೆಗೊಳಿಸಲಾಗುವುದು. ಈ ಯೋಜನೆಯು 2011–12 ನೇ ಸಾಲಿನಿಂದ ಜಾರಿಗೆ ಬಂದಿರುತ್ತದೆ. ಈ ಯೋಜನೆಯಡಿ ನಿಗಮವು ರೂ. 7.38 ಕೋಟಿಗಳು ಗ್ರಾಮೀಣ ಪ್ರದೇಶದಲ್ಲಿ ಮತ್ತು ರೂ. 33.42 ಕೋಟಿಗಳು ನಗರ ಪ್ರದೇಶದಲ್ಲಿ ವಸೂಲು ಮಾಡಲಾಗಿದ್ದು, ಇದರಿಂದ 20753 ಫಲಾನುಭವಿಗಳು ಅನುಕೂಲವನ್ನು ಪಡೆದಿರುತ್ತಾರೆ.

2014–15ನೇ ಆರ್ಥಿಕ ವರ್ಷದಲ್ಲಿ ಗೌರವಾನ್ವಿತ ಮುಖ್ಯಮಂತ್ರಿಗಳು ಆಶ್ರಯ ಸಾಲವನ್ನು ಬಡ್ಡಿ ಸಮೇತ ಮನ್ನಾ ಮಾಡುವುದಾಗಿ ಘೋಷಿಸಿರುತ್ತಾರೆ. ಇದರಿಂದ 10.84 ಲಕ್ಷ ಫಲಾನುಭವಿಗಳಿಗೆ ಲಾಭ ದೊರಕಲಿದೆ. ಈ ದಿನಾಂಕದವರೆಗೂ 4.19 ಲಕ್ಷ ಸಾಲ ಮನ್ನಾ ತಿಳುವಳಿಕೆ ಪತ್ರಗಳನ್ನು ಹೊರಡಿಸಲಾಗಿದೆ.

**ಕೌಶಲ್ಯ ಶಾಲೆ (ಫಿನಿಷಿಂಗ್ ಸ್ಕೂಲ್) ಸ್ಥಾಪನೆ :–**

ಬೆಂಗಳೂರಿನ ಕೆಂಗೇರಿ ಉಪನಗರದಲ್ಲಿರುವ ರಾಜೀವ್ ಗಾಂಧಿ ತಾಂತ್ರಿಕ ಕೇಂದ್ರದಲ್ಲಿ ನಿಗಮವು ತನ್ನದೇ ಆದ ವಿಶಿಷ್ಟ ಶೈಲಿಯಲ್ಲಿ "ಕೌಶಲ್ಯ ಶಾಲೆ" ಎಂಬ ಒಂದು ತರಬೇತಿ ಕೇಂದ್ರವನ್ನು ಸ್ಥಾಪಿಸಿದೆ. ಸದರಿ ತರಬೇತಿ ಕೇಂದ್ರದಲ್ಲಿ ಇಂಜಿನಿಯರಿಂಗ್ ಪದವೀಧರರು, ಡಿಪ್ಲೋಮ ಪದವೀಧರರು, ಕುಶಲ ಕರ್ಮಿಗಳು, ಗಾರೆ ಕೆಲಸದವರು, ಮರ ಗೆಲಸದವರು, ವಿದ್ಯುತ್ ಕಾರ್ಮಿಕರು, ಇಟ್ಟಿಗೆ / ಕಾಂಕ್ರೀಟ್ ಬ್ಲಾಕ್ಸ್ ತಯಾರಿಕೆ ಮತ್ತು ಕ್ರಯ ಪರಿಣಾಮಕಾರಿ ತಂತ್ರಜ್ಞಾನಗಳಲ್ಲಿ ಅರ್ಧ ತರಬೇತಿ ಉಳ್ಳವರು, ತರಬೇತಿ ಉಳ್ಳದವರು ಮತ್ತು ರಾಜ್ಯದ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿರುವ ಇತರೆ ನಿರುದ್ಯೋಗಿಗಳಿಗೆ ತಾಂತ್ರಿಕ / ವೃತ್ತಿನಿರತ ತರಬೇತಿಗಳನ್ನು ನೀಡಲಾಗುತ್ತಿದೆ. ಜೂನ್ 2008

ರಿಂದ ತರಬೇತಿಗಳು ಪ್ರಾರಂಭವಾಗಿವೆ. ಸದರಿ ಶಾಲೆಯು ತರಬೇತಿಗಾಗಿ ಬೇಕಾದಂತಹ ಎಲ್ಲಾ ಮೂಲಭೂತ ಸೌಕರ್ಯಗಳು ಮತ್ತು ಹೆಸರಾಂತ ವಿದ್ಯಾಸಂಸ್ಥೆ ಮತ್ತು ಕೈಗಾರಿಕಾ ಸಂಸ್ಥೆಗಳಲ್ಲಿ ಉತ್ತಮ ಅನುಭವವುಳ್ಳ ನುರಿತ ಅಧಿಕಾರಿ / ವ್ಯಕ್ತಿಗಳನ್ನು ಭೋದನಾಕಾರರಾಗಿ ಒಳಗೊಂಡಿದೆ ಎಂದು ತಿಳಿಸಲು ನಿಮ್ಮ ನಿರ್ದೇಶಕರು ಸಂತೋಷಿಸುತ್ತಾರೆ.

ಕೈಗಾರಿಕಾ ಸಂಸ್ಥೆಗಳ ಅವಶ್ಯಕತೆಗೆ ತಕ್ಕಂತೆ ಜನರ ನೈಪುಣ್ಯತೆಯನ್ನು ಹೆಚ್ಚಿಸಲು ಮತ್ತು ಅಭಿವೃದ್ಧಿಪಡಿಸಲು ಕೌಶಲ್ಯ ಶಾಲೆಯು ಉದ್ದೇಶಿಸಿದೆ. ಇದರಿಂದ ಅವರ career prospectus ಹೆಚ್ಚುತ್ತದೆ. ಅತೀ ಅಲ್ಪಾವಧಿಯಲ್ಲಿಯೇ, ಬಹಳಷ್ಟು ಇಂಜಿನಿಯರ್, ಡಿಪ್ಲೊಮ ಪಧವೀಧರರು ಮತ್ತು ಕಟ್ಟಡ ಕಟ್ಟುವ ಕೆಲಸಗಾರರು ಇವರುಗಳಿಗೆ ತರಬೇತಿಗಳನ್ನು ಕೌಶಲ್ಯ ಶಾಲೆಯು ನೀಡಿದೆ. ಇತರೆ ಕೈಗಾರಿಕಾ ಸಂಸ್ಥೆಗಳಲ್ಲಿ ಉದ್ಯೋಗವಕಾಶವು ಕೂಡ ದೊರೆತಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿವಿಧ ಇಲಾಖೆಗಳು ಮತ್ತು ಏಜೆನ್ಸಿಗಳು ತಮ್ಮ ಪ್ರಾಯೋಜಿತ ಯುವಕರುಗಳಿಗೆ ವೃತ್ತಿಪರ ಮತ್ತು ಇತರೆ ತರಬೇತಿಗಳನ್ನು ನೀಡುವ ಬಗ್ಗೆ ಕೌಶಲ್ಯ ಶಾಲೆಯನ್ನು ಸಂಪರ್ಕಿಸಿವೆ. ಖಾಸಗಿ ಸಂಸ್ಥೆಗಳಾದ ಸರ್ಕಾರೇತರ ಸಂಸ್ಥೆಗಳು (ಎನ್‌ಜಿಓ), ರೋಟರಿ ಕ್ಲಬ್‌ಗಳು, ಲಯನ್ಸ್ ಕ್ಲಬ್‌ಗಳು ಮತ್ತು ಅಭಿವೃದ್ಧಿ ಏಜೆನ್ಸಿಗಳು/ಟ್ರಸ್ಟ್‌ಗಳು ಕೂಡ ತರಬೇತಿದಾರರನ್ನು ಪ್ರಾಯೋಜಿಸಲು ಮುಂದಾಗಿವೆ. ಎಲ್ಲಾ ಅಭ್ಯರ್ಥಿಗಳು ಕ್ಯಾಂಪಸ್ ಮೌಖಿಕ ಪರೀಕ್ಷೆಯಲ್ಲಿ ಆಯ್ಕೆಯಾಗಿದ್ದು, ಕಾರ್ಖಾನೆಯವರು ಅವರನ್ನು ನೇಮಕಾತಿ ಮಾಡಿಕೊಂಡಿರುತ್ತಾರೆ. ಆಗಸ್ಟ್-2016ರಲ್ಲಿದ್ದಂತೆ, ಕಟ್ಟಡ ಕೆಲಸ, ನೀರು ಸರಬರಾಜು, ವಿದ್ಯುದೀಕರಣ, ಭಾರಿ ಯಂತ್ರೋಪಕರಗಳ ನಿರ್ವಹಣೆ, ಹೀಗೆ ಇತರೆ ಕ್ಷೇತ್ರಗಳಲ್ಲಿ 198 ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗಿದ್ದು, ಒಟ್ಟು 6,181 ಜನರಿಗೆ ತರಬೇತಿ ನೀಡಿದೆ.

ಇದರೊಂದಿಗೆ, ಸರ್ಕಾರದ ಇತರೆ ಇಲಾಖೆಗಳಾದ ಸಮಾಜ ಕಲ್ಯಾಣ ಇಲಾಖೆ, ಕೌಶಲ್ಯ ಆಯೋಗ, ಕಾರ್ಮಿಕ ಇಲಾಖೆ, ದೇವರಾಜ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರು ಆಯ್ಕೆ ಮಾಡಿದ ಫಲಾನುಭವಿಗಳಿಗೆ ಇತರೆ ಕ್ಷೇತ್ರಗಳಲ್ಲಿ ತರಬೇತಿ ನೀಡುವಂತೆ ಪ್ರಸ್ತಾವನೆಗಳು ಬಂದಿವೆ. ಆಯ್ಕೆಯಾದ ಫಲಾನುಭವಿಗಳಿಗೆ ಸಂಬಂಧಪಟ್ಟ ಇಲಾಖೆಗಳೆ ತರಬೇತಿ ವೆಚ್ಚವನ್ನು ಭರಿಸುತ್ತವೆ. ವಿವಿಧ ತರಬೇತಿ ಮತ್ತು ಪ್ರಮಾಣೀಕರಣ ಕಾರ್ಯಕ್ರಮಗಳನ್ನು ನೀಡಲು ತರಬೇತಿ ಸಂಸ್ಥೆಗಳು ಮತ್ತು ಭಾರಿ ಯಂತ್ರೋಪಕರಣಗಳ ತಯಾರಿಕೆ ನಿಗಮ/ಏಜೆನ್ಸಿಗಳಾದ**International Plumbing Association, Institute of Steel Development and Growth (INSDAG), Taurus Earthmovers Ltd & Universal Construction Machinery Equipment Ltd.**ನೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳಲು ಕೌಶಲ್ಯ ಶಾಲೆಯು ಆಲೋಚಿಸುತ್ತಿದೆ

ವಿವಿಧ ಇಲಾಖೆ ಮತ್ತು ಸಂಸ್ಥೆಗಳಿಂದ ಸ್ವೀಕರಿಸಿದ ಉತ್ಸಾಹಪೂರ್ಣ ಪ್ರತಿಕ್ರಿಯೆಯನ್ನು ಗಮನದಲ್ಲಿಟ್ಟುಕೊಂಡು, ಈಗಿರುವ ಅವಕಾಶಗಳನ್ನು ಸಂಗ್ರಹಿಸಿ ಅದನ್ನು ಸದುಪಯೋಗಗೊಳಿಸಲು ನಿಗಮವು ಯೋಜನೆಗಳನ್ನು ಹಾಕಿಕೊಂಡು ಸಿದ್ಧಗೊಳ್ಳುತ್ತಿದೆ ಮತ್ತು ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಗರಿಷ್ಠ ಜನರಿಗೆ ಅವಶ್ಯಕವಾದ ನೈಪುಣ್ಯತೆಯನ್ನು ನೀಡುವ ಮೂಲಕ ತನ್ನ ಸಾಮಾಜಿಕ ಜವಾಬ್ದಾರಿಯನ್ನು ನೆರೆವೇರಿಸಿ ಸಮಾಜಕ್ಕೆ ಹಿಂದಿರುಗಿಸಲು ಇಚ್ಛಿಸುತ್ತಿದೆ. ರಾಜ್ಯದ ಎಲ್ಲಾ ಪ್ರದೇಶಗಳ ವಿದ್ಯಾವಂತರು / ಅಲ್ಪ ವಿದ್ಯಾವಂತರ ಕೌಶಲ್ಯವನ್ನು ಅಭಿವೃದ್ಧಿ ಪಡೆಸಲು ಮತ್ತು ಅವರ ಕೌಶಲ್ಯಗಳನ್ನು ಉದ್ಯೋಗ ಅರ್ಹಕ್ಕಾಗಿ ಅಭಿವೃದ್ಧಿ ಪಡಿಸುವಲ್ಲಿ ತನ್ನ ಸಹಾಯ ಹಸ್ತವನ್ನು ಮತ್ತು ತನ್ನ ಅಲ್ಪ ನೆರವನ್ನು ನೀಡಲು ಕೌಶಲ್ಯ ಶಾಲೆಯು ಎಲ್ಲಾ ಜಿಲ್ಲೆಯ ನಿರ್ಮಿತಿ ಕೇಂದ್ರ ಮತ್ತು ಇಂಜಿನೀಯರಿಂಗ್ ಕಾಲೇಜುಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಪ್ರಸ್ತಾಪಿಸಿದೆ. ಇದರಿಂದ ಸ್ಥಳೀಯ ಪ್ರದೇಶಗಳಲ್ಲಿ ತರಬೇತಿ ಪಡೆದವರಿಗೆ ಮತ್ತು ಉದ್ಯಮಿಗಳಿಗೆ*win-win*ಅವಕಾಶವನ್ನು ಕಲ್ಪಿಸಿದಂತಾಗುತ್ತದೆ.

**12. ಆಶ್ರಯ ಮನೆಗಳ ನಿರ್ಮಾಣದಲ್ಲಿ ಫಾಸ್ಟ್ ಟ್ರ್ಯಾಕ್ ತಂತ್ರಜ್ಞಾನದ ಬಳಕೆ:-**

ನಿಗಮವು ಆರ್ಥಿಕ ಮತ್ತು ಸಾಮಾಜಿಕವಾಗಿ ಹಿಂದುಳಿದವರ ಹಾಗೂ ಅಲ್ಪ ಆದಾಯ ವರ್ಗದ ಜನರಿಗಾಗಿ ಅನುಷ್ಠಾನಗೊಳಿಸುವ ವಸತಿ ಯೋಜನೆಗಳಲ್ಲಿ ಮನೆಗಳ ನಿರ್ಮಾಣ ಕಾರ್ಯದಲ್ಲಿ ಹೊಸ ತಂತ್ರಜ್ಞಾನ 'ಫಾಸ್ಟ್ ಟ್ರ್ಯಾಕ್ ತಂತ್ರಜ್ಞಾನ' ವನ್ನು ಬಳಸುತ್ತಿದೆ ಎಂದು ತಿಳಿಸಲು ನಿಮ್ಮ ನಿರ್ದೇಶಕರು ಹರ್ಷಿಸುತ್ತಾರೆ. ಈ ಹೊಸ ತಂತ್ರಜ್ಞಾನ ಬಳಕೆಯು ವಾಜಪೇಯಿ ನಗರ ವಸತಿ, ಬಸವ ವಸತಿ ಯೋಜನೆ ಹಾಗೂ ನನ್ನ ಮನೆ ಯೋಜನೆಗಳಲ್ಲಿ ಯಶಸ್ವಿಯಾಗಿದೆ.

**ಮಾಹಿತಿ ಹಕ್ಕು ಅಧಿನಿಯಮ:-**

ನಿಗಮದ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಈ ಕೆಳಗಿನಂತಿದ್ದಾರೆ:–

1. ಮೇಲ್ಮನವಿ ಅಧಿಕಾರಿ– ಪ್ರಧಾನ ವ್ಯವಸ್ಥಾಪಕರು
2. ಸಾರ್ವಜನಿಕ ಮಾಹಿತಿ ಅಧಿಕಾರಿ– ಸಹಾಯಕ ಪ್ರಧಾನ ವ್ಯವಸ್ಥಾಪಕರು
3. ಸಹಾಯಕ ಸಾರ್ವಜನಿಕ ಅಧಿಕಾರಿ– ವ್ಯವಸ್ಥಾಪಕರು

ನಿಗಮವು ಮಾಹಿತಿ ಹಕ್ಕು ಅಧಿನಿಯಮ 4(1) (ಬಿ) ರಡಿ ತಯಾರಿಸಬೇಕಾದ ಕೈಪಿಡಿಯನ್ನು ತಯಾರಿಸಿದ್ದು, ಅದನ್ನು ನಿಗಮದ ವೆಬ್ http://ashraya.kar.nic.in ರಲ್ಲಿ ನಮೂದಿಸಲಾಗಿದೆ.